ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು  ಮತ್ತು ಪ್ರ.ದ.ನ್ಯಾದಂ.ಯವರ ನ್ಯಾಯಾಲಯ,
ಕುಂದಾಪುರ
ಸಿ.ಸಿ. ನಂಬ್ರಃ 1783-2013

ಚಾಸಾ ಃ 1   ಪ್ರಾಸಾ ಃ 1

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು

ದಿನಾಂಕಃ 11-12-2014

ವಾಗ್ಮೂಲದವರ ಹೆಸರು ಃ ಸುಮಂಗಲ
ಗಂಡನ ಹೆಸರು ಃ ಸುರೇಂದ್ರ ಆಚಾರಿ
ವಯಸ್ಸು ಃ 43 ವರ್ಷ
ಉದ್ಯೋಗ ಃ ಗೃಹಿಣಿ
ವಾಸಸ್ಥಳ ಃ ಮೂಡ್ಲಕಟ್ಟೆ, ಕುಂದಾಪುರ

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದಃ

ದಿಃ27-11-2012ರಂದು ರಾತ್ರಿ 11-30ಗಂಟೆ ಸಮಯಕ್ಕೆ ನಾನು ಮತ್ತು ನನ್ನ ತಮ್ಮ ಕೋಟೇಶ್ವರದ ಕಾಗೇರಿಯಲ್ಲಿ ದೇವರದ ಉತ್ಸವದ ಕಟ್ಟೇ ಪೂಜೆ ಮುಗಿಸಿ ಬರುತ್ತಿದ್ದಾಗ ನ್ಯಾಯಾಲಯದ ಮುಂದೆ ಇರುವ 1ರಿಂದ 3ನೇ ಆರೋಪಿತರು ನನ್ನನ್ನು ಹಿಂಬಾಲಿಸಿಕೊಂಡು ಬಂದರು. ಎದುರುಗಡೆಯಿಂದ ಸಹ ತುಂಬಾ ಜನ ಬರುತ್ತಿದ್ದ ಕಾರಣ ನಾನು ಸದ್ರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುದಿಲ್ಲ. ನಾನು ಮತ್ತು ನನ್ನ ತಮ್ಮಂದಿರಾದ ರವೀಂದ್ರ ಮತ್ತು ರಾಘವೇಂದ್ರ ಒಟ್ಟಿಗೆ ದೇವರ ಆರತಿ ತೆಗೆದುಕೊಂಡು ಬರುತ್ತಿದ್ದೆವು. ಆರೋಪಿ ಪ್ರಹ್ಲಾದ ಮತ್ತು ಅಭಿಶೇಕ ಎನ್ನುವವರನ್ನು ಸಾಕ್ಷಿಯು ತೋರಿಸಿ ಅವರಿಬ್ಬರೂ ನನ್ನನ್ನು ದಾಟಿ ಮುಂದೆ ಹೋದರು. ಆರೋಪಿ ಅಭಿಶೇಕ ನನ್ನ ಹಿಂದುಗಡೆಯಿಂದ ಬಂದು ನನ್ನ ಕುತ್ತಿಗೆಯಲ್ಲಿದ್ದ ಮಾಂಗಲ್ಯ ಸರ ಮತ್ತು ಕೆಂಪು ಹವಳದ ಸರವನ್ನು ಕಿತ್ತುಕೊಂಡು ಬೀಜೋತ್ಪಾದನಾ ಕೇಂದ್ರ ಮಾರ್ಗವಾಗಿ ಸರಿಗೆ ಬೇಲಿ ಹಾರಿ ಸೀಟ್ ಪಾರ್ಮ್‌ನಿಂದ ಓಡಿ ಹೋದರು. ನನ್ನ ಚಿನ್ನಾಭರಣವು 9-10 ಪವನ್ ಆಗಿದ್ದು ಅವುಗಳ ಅಂದಾಜು ಮೌಲ್ಯ ಸುಮಾರು 2ಲಕ್ಷ ರೂ. ಆಗಬಹುದು.

2. ನಂತರ ನನ್ನ ತಮ್ಮ ರವೀಂದ್ರ ಸದ್ರಿ ವ್ಯಕ್ತಿಯನ್ನು ಹಿಂಬಾಲಿಸಿಕೊಂಡು ಹೋದರು ಆದರೆ ಅವರು ಸಿಗಲಿಲ್ಲ. ನಂತರ ದಿಃ28-11-2012ರಂದು ಬೆಳಿಗ್ಗೆ 10-00 ಗಂಟೆಗೆ ಕುಂದಾಪುರ ಪೋಲೀಸ್ ಠಾಣೆಗೆ ಹೋಗಿ ಪಿರ್ಯಾದಿಯನ್ನು ನೀಡಿರುತ್ತೇನೆ.

ಪಿರ್ಯಾದಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನನ್ನ ಸರ ಮತ್ತು ಲಕ್ಷ್ಮೀ ಪೆಂಡೆಂಟ್‌ನ್ನು ನನ್ನ ಕುತ್ತಿಗೆಯಿಂದ ಸುಲಿಗೆ ಮಾಡಿಕೊಂಡು ಹೋದ ವ್ಯಕ್ತಿಯು ನ್ಯಾಯಾಲಯದ ಮುಂದೆ ಇರುವ 3ನೇ ಆರೋಪಿ ಅಭಿಶೇಕ್ ಆಗಿರುತ್ತಾರೆ.

3. ನಂತರ ಪೋಲೀಸರು ಪಿರ್ಯಾದಿ ಕೊಟ್ಟ ಮಧ್ಯಾಹ್ನ 4-00ರಿಂದ 5-00ಗಂಟೆ ಹೊತ್ತಿಗೆ ಪೋಲೀಸರು ತಕ್ಷೀರು ಸ್ಥಳಕ್ಕೆ ಬಂದು ಸ್ಥಳವನ್ನು ನಾನು ತೋರಿಸಿಕೊಟ್ಟಂತೆ ಪೋಲೀಸರು ಸ್ಥಳವನ್ನು ಪರಿಶೀಲಿಸಿ ಪಂಚನಾಮೆಯನ್ನು ಮಾಡಿರುತ್ತಾರೆ. ಆ ಸಮಯದಲ್ಲಿ ಸುರೇಶ ಮತ್ತು ಮೋಹನರಾಜ ಸಹ ನನ್ನ ಜೊತೆ ಇದ್ದರು. ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಲೀಸರು ನಕಾಶೆಯನ್ನು ಸಹ ತಯಾರಿಸಿರುತ್ತಾರೆ. ನಕಾಶೆಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಮಹಜರನ್ನು 4-00ರಿಂದ 5-00ಗಂಟೆವರೆಗೆ ಮಾಡಿರುತ್ತಾರೆ.

4. ಜನವರಿ 2013ನೇಸಾಲಿನಲ್ಲಿ ಪೋಲೀಸರು ನನಗೆ ಪುನಃ ಪೋಲೀಸ್ ಠಾಣೆಗೆ ಕರೆಸಿ 1ನೇ ಆರೋಪಿ ಪ್ರಶಾಂತನನ್ನು ನನಗೆ ತೋರಿಸಿದ್ದರು. ಆಗ ನಾನು ಅವರನ್ನು ನೋಡಿ ನನಗೆ ಆ ದಿನ ಹಿಂಬಾಲಿಸಿಕೊಂಡು ಬಂದ ವ್ಯಕ್ತಿ ಇವರೇ ಎಂದು ಗುರುತಿಸಿರುತ್ತೇನೆ. ನಂತರ ಕಳ್ಳತನವಾದ ಮೂರು ತಿಂಗಳ ನಂತರ ನನಗೆ ಪೋಲೀಸರು ಮತ್ತೊಮ್ಮೆ ಠಾಣೆಗೆ ಕರೆಸಿದ್ದು ಆರೋಪಿ ಪ್ರಹ್ಲಾದ ಮತ್ತು ಅಭಿಶೇಕ್‌ರವರನ್ನು ತೋರಿಸಿದ್ದು ಅವರನ್ನು ಕೂಡ ನಾನು ಗುರುತಿಸಿರುತ್ತೇನೆ. ಆ ಸಮಯದಲ್ಲಿ ಪೋಲೀಸರು ನನ್ನ ಕಳ್ಳತನವಾದ ಮಾಂಗಲ್ಯ ಸರ, ಹವಳದ ಸರ ತುಂಡಾಗಿದ್ದು ನಾನು ಸರಿಗೆ, ಚಿನ್ನದ ಗುಂಡು, ಲಕ್ಷ್ಮಿ ಪೆಂಡೆಂಟ್ ಮತ್ತು ಹವಳದ ಸರವನ್ನು ಠಾಣೆಯಲ್ಲಿ ನೋಡಿ ಗುರುತಿಸಿರುತ್ತೇನೆ.

5. ಆರೋಪಿ ಅಭಿಶೇಕ್ ನನ್ನ ಕುತ್ತಿಗೆಯಿಂದ ಕರಿಮಣಿ ಸರ ಮತ್ತು ಹವಳದ ಸರ ಎಳೆಯುವಾಗ ನನ್ನ ಕುತ್ತಿಗೆಗೆ ಸ್ವಲ್ಪ ಗಾಯವಾಗಿತ್ತು. ಆ ಬಗ್ಗೆ ನಾನು ಕುಂದಾಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಪೋಲೀಸ್ ಠಾಣೆಗೆ ಮತ್ತೇ

ಹೋಗಿದ್ದಾಗ ನ್ಯಾಯಾಲಯದ ಮುಂದೆ ಇರುವ 4ನೇ ಆರೋಪಿ ಪ್ರೇಮಾರವರು ನನ್ನ ಆಭರಣಗಳನ್ನು ಒಂದು ಸೊಸ್ಯಾಟಿಯಲ್ಲಿ ಅಡವಿಟ್ಟ ಬಗ್ಗೆ ಪೋಲೀಸರು ನನಗೆ ತಿಳಿಸಿರುತ್ತಾರೆ. ಈ ಎಲ್ಲಾ ವಿಷಯಗಳ ಬಗ್ಗೆ ನಾನು ಪೋಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆ.

6. ಸುಮಾರು ಎರಡು ಮೂರು ತಿಂಗಳ ನಂತರ ನಾನು ಮಾನ್ಯ ನ್ಯಾಯಾಲಯದ ಆದೇಶದಂತೆ ನನ್ನ ಮಾಂಗಲ್ಯ ಸರ ಮುತ್ತ ಹವಳದ ಸರವನ್ನು ನನ್ನ ಮಧ್ಯಂತರ ವಶಕ್ಕೆ ಪಡೆದುಕೊಂಡಿರುತ್ತೇನೆ. ಆಗ ನಾನು ಪೋಲೀಸರಿಗೆ ಚಿನ್ನಾಭರಣಗಳನ್ನು ಸ್ವೀಕರಿಸಿದ ಬಗ್ಗೆ ಎರಡು ಸ್ವೀಕೃತಿಯನ್ನು ನೀಡಿರುತ್ತೇನೆ. ಎರಡು ಸ್ವೀಕೃತಿಯನ್ನು ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.4 ಮತ್ತು ನಿ.ಪಿ.5 ಎಂದು, ಸಾಕ್ಷಿಯ ಸಹಿಯನ್ನು ಕ್ರಮವಾಗಿ ನಿ.ಪಿ.4(ಎ) ಮತ್ತು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಈಗ ನಾನು ಕರಿಮಣಿ ಸರ, ಸರಿಗೆ ಮತ್ತು ಗುಂಡನ್ನು ರಿಪೇರಿ ಮಾಡಿ ಧರಿಸಿರುತ್ತೇನೆ. ಸರಿಗೆಯನ್ನೊಳಗೊಂಡ ಕರಿಮಣಿ ಸರವನ್ನು ಹಾಜರುಪಡಿಸಿದ್ದು ಅದನ್ನು ಮು.ಮಾ.1 ಎಂದು, ಅದೇ ರೀತಿ ಲಕ್ಷ್ಮೀ ಪೆಂಡೆಂಟ್ ಒಳಗೊಂಡ ಹವಳದ ಸರವನ್ನು ನಾನು ರಿಪೇರಿ ಮಾಡಿ ಈ ದಿನ ತಂದಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲಿರುವ ಕಳ್ಳತನವಾದ ಸ್ಥಳದ ಮತ್ತು ಚಿನ್ನಾಭರಣಗಳ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿ.ಪಿ.6 ಮತ್ತು ನಿ.ಪಿ.7 ಎಂದು ಗುರುತಿಸಲಾಯಿತು. ಸಿ.ಡಿ.ಯನ್ನು ಮು.ಮಾ.3 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ 2ರಿಂದ 4ನೇ ಶ್ರೀ ಆರ್. ಕೆ. ಎಂ. ವಕೀಲರಿಂದಃ

7. ಚಿನ್ನದ ಸರವನ್ನು ನಾನು ಬಿಡಿಸಿಕೊಳ್ಳುವಾ ನಾನು ನ್ಯಾಯಾಲಯಕ್ಕೆ ಬಾಂಡ್‌ನ್ನು ಬರೆದುಕೊಟ್ಟಿರುತ್ತೇನೆ. ಸದ್ರಿ ಬಾಂಡ್‌ನ ಯಾವುದೇ ನಿಯಮವನ್ನು ನಾನು ಉಲ್ಲಂಘನೆ ಮಾಡಿರುವುದಿಲ್ಲ. ಪಿರ್ಯಾದಿ ಕೊಡುವಾಗ ನನಗೆ ಆರೋಪಿತರ ಹೆಸರುಗಳು ಗೊತ್ತಿರಲಿಲ್ಲ. ಅವರ ಪೂರ್ವ ಪರಿಚಯ ಇಲ್ಲ ಕಾರಣ ಅವರ ಹೆಸರುಗಳು ಗೊತ್ತಿರಲಿಲ್ಲ. 1ರಿಂದ 3ನೇ ಆರೋಪಿತರು ನನ್ನ ಹಿಂದೆ ಮುಂದೆ ಓಡಾಡುತ್ತಿದ್ದರು ಎಂದು ನನ್ನ

ಪಿರ್ಯಾದಿಯಲ್ಲಿ ಹೇಳಿರುವುದಿಲ್ಲ. ಅದೇ ರೀತಿ ಎರಡು ಜನ ಆರೋಪಿತರು ನನ್ನ ಎದುರಿಗೆ ಬಂದರು ಎಂದು ಸಹ ನಾನು ನನ್ನ ಪಿರ್ಯಾದಿಯಲ್ಲಿ ಹೇಳಿರುವುದಿಲ್ಲ. ಯಾವ ಆರೋಪಿತರ ಮುಖಚಹರೆ, ಅಂದಾಜು ಪ್ರಾಯ, ಎತ್ತರ ಮತ್ತು ಶರೀರದ ಲಕ್ಷಣಗಳನ್ನು ನಾನು ಪಿರ್ಯಾದಿಯಲ್ಲಿ ಹೇಳಿರುವುದಿಲ್ಲ. ಅದೇ ರೀತಿ ಆರೋಪಿತರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ಸಹ ನಾನು ಪಿರ್ಯಾದಿಯಲ್ಲಿ ಹೇಳಿರುವುದಿಲ್ಲ. ಸಿ

8. ಆಗ ಪೂಜೆ ಸಲ್ಲಿಸಿ ಹೋಗುವವರು ಸದಿರ ರಸ್ತೆಯಲ್ಲಿ ತುಂಬಾ ಜನ ಇದ್ದರು. ಆಗ ರಾತ್ರಿ 11-30ಗಂಟೆ ಕತ್ತಲೆಯಾಗಿತ್ತು. ಆ ದಿನ ಅಶ್ವತ್ಥ ಮರದ ಕಟ್ಟೆಯಲ್ಲಿ ಕೋಟೀಲಿಂಗೇಶ್ವರ ದೇವಸ್ಥಾನದ ಉತ್ಸವ ಮೂರ್ತಿಯನ್ನು ಕುಳ್ಳಿರಿಸಿದ್ದರು. ಪ್ರತೀವರ್ಷ ಕೋಟೀಗಲಿಂಗೇಶ್ವರ ದೇವಸ್ಥಾನದ ಉತ್ಸವ ಮೂರ್ತಿಯನ್ನು ಕುಳ್ಳಿರಿಸಿ ಊರ ಜನರು ಪೂಜೆ ಮಾಡುತ್ತಾರೆ. ನಂತರ ಪೂಜೆ ಮುಗಿಸಿ ಎಲ್ಲರೂ ಗುಂಪಾಗಿ ಮನೆಗೆ ಹೋಗುತ್ತಾರೆ. ಪಿರ್ಯಾದಿಯಲ್ಲಿ ನಾನು ಒಬ್ಬ ವ್ಯಕ್ತಿ ನನ್ನ ಕರಿಮಣಿ ಸರ ಮತ್ತು ಹವಳ ಸರವನ್ನು ಕಿತ್ತುಕೊಂಡು ಬಗ್ಗೆ ಹೇಳಿದ್ದೇನೆ ಆತನ ಅಪರಿಚಿತ ಎಂದು ಕೂಡ ಹೇಳಿದ್ದೇನೆ ಎಂದರೆ ಸರಿ.

9. ನಿ.ಪಿ.1ರಲ್ಲಿರುವ ಕೈ ಬರಹ ನನ್ನ ತಮ್ಮ ರಾಘವೇಂದ್ರನದ್ದು ಆಗಿರುತ್ತದೆ. ನನ್ನ ಪಿರ್ಯಾದಿಯಲ್ಲಿ ಅಪರಿಚಿತ ಹಿಂಂನಿಂದ ನನ್ನ ಸರವನ್ನು ಎಳೆದನೋ ಅಥವಾ ಮುಂದಿನಿಂದ ಎಳೆದನೋ ಎಂದು ನಾನು ಹೇಳಿರುವುದಿಲ್ಲ. 1ರಿಂದ 4ನೇ ಆರೋಪಿತರ ಹೆಸರುಗಳನ್ನು ಪೊಲೀಸರು ಠಾಣೆಯಲ್ಲಿ ಹೇಳಿದ್ದರು ಎಂದರೆ ಸರಿ. ನನ್ನ ಚೈನ್‌ನ್ನು ಎಳೆದ ವ್ಯಕ್ತಿ ಅಭಿಶೇಕ ಎಂದು ಪೋಲೀಸರು ಹೇಳಿದ್ದರು ಎಂದರೆ ಸರಿ. ಅದೇ ಪ್ರಕಾರ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರ ಹೆಸರುಗಳನ್ನು ಹೇಳಿರುತ್ತೇನೆ. ನನಗೆ ಆರೋಪಿತರ ಹೆಸರುಗಳನ್ನು ಹೇಳಿದ ಪೋಲೀಸ್ ಅಧಿಕಾರಿಯ ಹೆಸರು ರೇವತಿ ಪಿಎಸ್ಐ. ಅವರು ಹೇಳುವ ತನಕ ನನಗೆ ಯಾವುದೇ ಆರೋಪಿತರ ಹೆಸರು ಗೊತ್ತಿರಲಿಲ್ಲ.

10. ತುಂಬಾ ಜನ ವ್ಯಕ್ತಿಗಳನ್ನು ನಿಲ್ಲಿಸಿ ಆರೋಪಿತರನ್ನು ಗುರುತು ಹಚ್ಚುವ ಕವಾಯತ್‌ನ್ನು ಮಾಡಿರುವುದಿಲ್ಲ. ಕುಂದಾಪುರ ಪೋಲೀಸ್ ಠಾಣೆಯಲ್ಲಿ ನನ್ನನ್ನು ಆರೋಪಿತರನ್ನು ಗುರುತಿಸಲು ಹೇಳಿದ್ದರು. ಕೃತ್ಯ ನಡೆಯುವಾಗ ನನ್ನ ಜೊತೆ ನನ್ನ ತಮ್ಮ

ರವೀಂದ್ರ ಇದ್ದ, ರಾಘವೇಂದ್ರ 10 ಅಡಿ ದೂರ ಹಿಂದೆ ಇದ್ದ. ಆಗ ರಾಘವೇಂದ್ರನಿಗೆ ಸುಮಾರು 35 ವರ್ಷ ವಯಸ್ಸು. ಕೃತ್ಯ ನಡೆಯುವಾಗ ಮುಂದೆ ಯಾರು ಇರಲಿಲ್ಲ. ನನ್ನ ಹಿಂದಿನಿಂದ ಜನರು ಇದ್ದರು. ನನ್ನ ಇಬ್ಬರೂ ತಮ್ಮಂದಿರು ಓಡಿ ಹೋದ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿದ್ದರು. ಕತ್ತಲೆಯಾಗಿದ್ದರಿಂದ ತುಂಬಾ ದೂರ ಓಡಿ ಹೋಗಿದ್ದರಿಂದ ವಾಪಾಸು ಬಂದಿದ್ದರು.

11. ನನ್ನ ಚೈನ್ ಎಳೆಯುವಾಗ ನಾನು ಕೂಗಿಕೊಂಡೆ. ತೆಗೆಯುತ್ತಿದ್ದಾಗ ನನಗೆ ತಿಳಿಯಲಿಲ್ಲ. ಆದರೆ ಆರತಿ ದೀಪದ ಬೆಳಕಿನಿಂದ ಎದುರು ಬಂದ ವ್ಯಕ್ತಿಯನ್ನು ನಾನು ನೋಡಿದ್ದೆ. ಆದರೆ ಪಿರ್ಯಾದಿ ಕೊಡುವಾಗ ಆರತಿ ದೀಪದ ಬೆಳಗಿನಿಂದ ನಾನು ಚೈನ್ ಎಳೆದ ವ್ಯಕ್ತಿಯನ್ನು ಮುಂದಿನಿಂದ ಬರುವಾಗ ನೋಡಿದ್ದೆ ಎಂದು ಹೇಳಿರುವುದಿಲ್ಲ. ನನ್ನ ಆರತಿ ದೀಪವನ್ನು ಪೋಲೀಸರು ಅಮಾನತು ಪಡಿಸಿಕೊಂಡಿರುವುದಿಲ್ಲ. ನನ್ನ ತಮ್ಮ ರವೀಂದ್ರ ಪೋಲೀಸ್ ಠಾಣೆಗೆ ಫೋನ್ ಮಾಡಿ ಎಲ್ಲಾ ವಿಷಯ ತಿಳಿಸಿರುತ್ತಾನೆ. ಕತ್ತಲೆ ಇರುವುದರಿಂದ ನಾವು ಆ ದಿನ ಬೇರೆ ಯಾರಿಗೂ ವಿಷಯ ಹೇಳಿರುವುದಿಲ್ಲ.

12. ನಮ್ಮ ಮನೆಯಲ್ಲಿ ದ್ವಿಚಕ್ರ ವಾಹನ ಇರುತ್ತದೆ. ನಮ್ಮ ಮನೆಯು ಮೂಡ್ಲಕಟ್ಟೆ ಕಂದಾವರದಲ್ಲಿದೆ. ನನ್ನ ತಾಯಿ ಮನೆ ಕಾಗೇರಿ. ಕಾಗೇರಿಗೆ ಹೋಗಬೇಕಾದರೆ ಕೋಟೇಶ್ವರ ಮೂಲಕವರೇ ಹೋಗಬೇಕು ಎಂದರೆ ಸರಿ. ತುಂಬಾ ತಡವಾಗಿದ್ದರಿಂದ ಪೋಲೀಸರು ಯಾರು ಬಂದಿರಲಿಲ್ಲ. ನನ್ನ ತಮ್ಮಂದಿರು ಮತ್ತು ಊರಿನವರು ರಾತ್ರಿ ಇಡೀ ಕಳ್ಳರನ್ನು ಹುಡುಕುವ ಪ್ರಯತ್ನಮಾಡಿದ್ದರು.

13. ಕೋಟೇಶ್ವರದಿಂದ ಕುಂದಾಪುರ ಪೋಲೀಸ್ ಠಾಣೆ 6 ಕಿ.ಮೀ. ದೂರದಲ್ಲಿದೆ. ಕುಂದಾಪುರಕ್ಕೆ ಬರಲು ಬಸ್ಸಿನಲ್ಲಿ 15 ನಿಮಿಷ ಸಾಕಾಗುತ್ತದೆ. ಪಿರ್ಯಾದಿ ಕೊಡಲು ನಾವು ಮನೆಯಿಂದ 10-00ಗಂಟೆ ಹೊರಟಿದ್ದೆವು. ಮುಂಚಿನ ದಿನ ಕಳ್ಳತನವಾದ ನಂತರ ನಾನು ರಾತ್ರಿಯಿಡಿ ನಿದ್ದೆ ಮಾಡಿರುವುದಿಲ್ಲ. ಪ್ರೇಮ ಮತ್ತು ಪ್ರಶಾಂತ ಎಂಬ ಆರೋಪಿತರ ಪಾತ್ರ ಏನು ಎಂದು ಪೋಲೀಸರು ನನಗೆ ಹೇಳಿದ್ದರು ಎಂದರೆ ಸರಿ.

14. ನಾನು ಪೋಲೀಸರಿಗೆ ಒಟ್ಟು ಎರಡು ಸಹಿಯನ್ನು ನೀಡಿರುತ್ತೇನೆ. ಕುಂದಾಪುರ ಠಾಣೆಯಲ್ಲಿ ಪಿರ್ಯಾದಿಗೆ ಒಂದು, ಹೇಳಿಕೆಗೆ ಒಂದು ಸಹಿಯನ್ನು ಮತ್ತು ಚಿನ್ನಾಭರಣಗಳನ್ನು ಪಡೆಯುವಾಗ ಬೇರೆ ಸಹಿಗಳನ್ನು ಮತ್ತು ಸ್ಥಳದಲ್ಲಿ ಒಂದು ಸಹಿಯನ್ನು

ನೀಡಿರುತ್ತೇನೆ. ಸ್ಥಳದಲ್ಲಿ ನನಗೆ ಚಿನ್ನದ ಹವಳದ ಚೈನ್‌ನ ಒಂದು ತುಂಡು ಸಿಕ್ಕಿರುತ್ತದೆ. ಹವಳದ ಸರ ತುಂಡಾಗಿ ಕೆಲವು ಹವಳಗಳು ಹೋಗಿದ್ದವು. ಮಾಂಗಲ್ಯದ ಸರ ಸಹ ತುಂಡಾಗಿತ್ತು. ಮಾಂಗಲ್ಯ ಸರದ ಕೊಂಡಿ, ಸರಿಗೆ ಮತ್ತು ಗುಂಡುಗಳು ಎಲ್ಲಾ ಬೇರ್ಪಟ್ಟಿದ್ದವು. ಸದ್ರಿ ಆಭರಣಗಳು ಎಂದು ತೋರಿಸಲು ನಾನು ಬಿಲ್ಲುಗಳನ್ನು ಪೋಲೀಸರಿಗೆ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

15. ನನ್ನ ಚಿನ್ನದ ಮಾಂಗಲ್ಯ ಸರ ಮತ್ತು ಹವಳದ ಸರ ಸುಸ್ಥಿತಿಯಲ್ಲಿತ್ತು ಎಂದೂ ಕೂಡ ತುಂಡಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮಾತು ಕೇಳಿ ಆರೋಪಿತರ ವಿರುದ್ಧ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಬೇರೆ ಯಾವುದೋ ರೀತಿಯಲ್ಲಿ ಆದ ಗಾಯಗಳಿಗೆ ನಾನು ಚಿಕಿತ್ಸೆ ಪಡೆದಿದ್ದು ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿಯೇ ಮಹಜರಿಗೆ ಸಹಿ ಮಾಡಿದ್ದು ಎಂದರೆ ಸರಿಯಲ್ಲ. ನನ್ನ ಚಿನ್ನದ ಸರಗಳು ಕಳ್ಳತವಾಗಿದ್ದೇ ಇಲ್ಲ ಎಂದರೆ ಸರಿಯಲ್ಲ.

16. ಪಾಟೀ ಸವಾಲುಃ 1ನೇ ಆರೋಪಿತರ ಪರ ವಕೀಲರು ಮೇಲ್ಕಂಡ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.